ಶ್ರೀ ಹೆಚ್.ಸಿ.ಬಾಲಕೃಷ್ಣ:- ಎಲ್ಲಾ ಕಮಿಟಿಯಲ್ಲಿಯೂ ತಿರಸ್ಕಾರ ಮಾಡುತ್ತಿದ್ದಾರೆ. ಎಲ್ಲಿಯೂ ನಮಗೆ ನ್ಯಾಯ ಸಿಗುತ್ತಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಎಲ್ಲಾ ಸದಸ್ಯರ ಅಭಿಪ್ರಾಯ ಏನೆಂದರೆ, ನಿಮಗೆ ಅರ್ಧ ಗಂಟೆಯ ನಂತರ ಮಾಹಿತಿ ಸಿಕ್ಕಮೇಲೆಯೇ ತಾವು ಹೇಳಿಕೆ ಕೊಡಿ. ಸದನ ನಡೆಯುತ್ತಿರುವಾಗ ಸಭೆ ಮಾಡಿ ಚರ್ಚೆ ಮಾಡುವಂತಹ ಅಗತ್ಯವಿಲ್ಲ.ಇಲ್ಲಿಯೇ ನೀವು ನೀರು ಬಿಡುವುದಿಲ್ಲ ಎನ್ನುವ ನಿಲುವನ್ನು ತಾವು ಸ್ಪಷ್ಟ ಮಾಡಿ. ಪರಿಣಾಮ ಏನಾಗುತ್ತದೆ ಎನ್ನುವುದನ್ನು ಎಲ್ಲರೂ ಒಟ್ಟಿಗೆ ಎದುರಿಸೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಇನ್ನು ಅರ್ಧ ಗಂಟೆ ಬೇರೆ ವಿಷಯ ಚರ್ಚೆ ಮಾಡೋಣ. ಅರ್ಧ ಗಂಟೆ ನಂತರ ಬಂದು ಸದನಕ್ಕೆ ನಿಮ್ಮ ಉತ್ತರವನ್ನು ತಿಳಿಸಿ.

ಅಧ್ಯಕ್ಷರು:- ಈಗ ಶೂನ್ಯ ವೇಳೆ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರದ್ದು ಚರ್ಚೆ ನಡೆಸಬೇಕು.

(ಗೊಂದಲ)

ಅಧ್ಯಕ್ಷರು:- ಆನಂತರ ತೆಗೆದುಕೊಳ್ಳೋಣ. ೨-೩ ವಿಷಯಗಳು ಶೂನ್ಯವೇಳೆಯಲ್ಲಿ ಚರ್ಚೆಯಾಗಬೇಕಾಗಿದೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ ನಾನು ಬೆಳಗ್ಗೆ 10.00 ಗಂಟೆಗೇ ತಮಗೆ ನಿಯಮಾವಳಿ ೬೯ರ ಅಡಿಯಲ್ಲಿ ಚರ್ಚೆ ಮಾಡಲು ಅರ್ಜಿ ಕೊಟ್ಟಿದ್ದೇನೆ. ಆದ್ದರಿಂದ ನನಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:- ವಿರೋಧ ಪಕ್ಷದ ನಾಯಕರೂ ನಿಯಮ 69 ರ ಅಡಿಯಲ್ಲಿ ಚರ್ಚೆ ಮಾಡಬೇಕೆಂದು ಅರ್ಜಿ ಕೊಟ್ಟಿದ್ದಾರೆ. ಅವರನ್ನು ಬಿಟ್ಟು ನಿಮಗೆ ಕೊಡಬೇಕೆಂದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:- ನಾನು ಬೆಳಗ್ಗೆ ಮೊದಲೇ ಕೊಟ್ಟಿದ್ದೇನೆ. ನನಗೆ ಮೊದಲು ಅವಕಾಶ ಕೊಡಬೇಕು.

(ಗೊಂದಲ)

ಅಧ್ಯಕ್ಷರು:- ಆ ರೀತಿಯ ಸಂಪ್ರದಾಯವನ್ನು ಹೇಳಬೇಡಿ.

(ಗೊಂದಲ)

ಅಧ್ಯಕ್ಷರು:- ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತಿದ್ದಾರೆ. ಅವರು ಮಾತನಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ರೂಲ್ ೬೯ ಗೆ convert ಆಗಿದೆ. ಮಾನ್ಯ ರೇವಣ್ಣನವರೆ ತಾವು ಆನಂತರ ಮಾತನಾಡಿ. ನಾನು ಐದು ನಿಮಿಷ ಮಾತ್ರ ಮಾತನಾಡುತ್ತೇನೆ. ನೀವೇ ಅದರ ಬಗ್ಗೆ ಜಾಸ್ತಿ ಮಾತನಾಡಿ.